ಶ್ರೀ ಎ. ನಂಜಪ್ಪ.— ನನ್ನ ಪ್ರಶ್ನೆಯಂ (ಇ) ಭಾಗಕ್ಕೆ ಕೊಟ್ಟಿರುವ ಉತ್ತರವನ್ನು ನೋಡಿದರೆ, ತಾವು ಹಿಂದಿನ ರಿಕಾರ್ಡನ್ನು ನೋಡದೆ ಉತ್ತರ ಕೊಟ್ಟಿದ್ದೀರಿ ಎಂದು ನನ್ನ ಭಾವನೆ ಸರ್ ಎಂ. ವಿಶ್ವೇಶ್ವರಯ್ಯನವರು ದಿವಾನರಾಗಿದ್ದಾಗ, ಚೀಫ್ ಇಂಜಿನಿಯರ್ ಆಗಿದ್ದಾಗ ಈ ಪ್ರಾಜೆಕ್ಟನ್ನು ಮಂಜೂರು ಮಾಡಿ, ಅದರ ಸ್ವಲ್ಪ ಭಾಗ ಕೆಲಸ ನಡೆದಿರತಕ್ಕದ್ದು ರಿಕಾರ್ಡನ್ನು ತಾವು ಪರಿಶೀಲನೆಮಾಡದೆ ಉತ್ತರ ಹೇಳಿದ್ದೀರಿ ಎಂದು ಹೇಳುತ್ತೇನೆ. ಇದಕ್ಕೆ ತಾವು ಏನಂ ಹೇಳುತ್ತೀರಿ?

† ಶ್ರೀ ಸುಭಾಶ್ ಅಸ್ಕೂರೆ.—ತಮ್ಮ ಅಭಿಪ್ರಾಯಂ ಸರಿಯಾದದು ಅಲ್ಲ.

ಶ್ರೀ ಎ. ನಂಜಪ್ಪ —ಸ್ವಾಮಿ, ಅರಸೀಕೆರೆ ತಾಲ್ಲೂಕಿನಲ್ಲಿ ಪ್ರತಿವರ್ಷವೂ ೨೪ ಇಂಚು ಮಳೆ ಆಗುತ್ತಾ ಇರುವುದರಿಂದ ಆ ಪ್ರದೇಶ ಆಗಾಗ್ಗೆ ಕ್ಷಾಮಕ್ಕೆ ತುತ್ತಾಗುತ್ತಾ ಇರುವುದರಿಂದ ಈಗಲಾದರೂ ಈ ಯಗಚಿ ಪ್ರಾಜೆಕ್ಟನ್ನು ತೆಗೆದುಕೊಳ್ಳುವುದಕ್ಕೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ಸುಭಾಸ್ ಅಸ್ಕೂರೆ —ಮಾನ್ಯ ಸದಸ್ಯರು ಕೇಳಿದಂಥ ಯಗಚಿ ರಿವರ್ ಏನು ಇದೆ ಅದು ಅರಸೀಕೆರೆ ಭಾಗದಲ್ಲಿ ಅಷ್ಟು ಹರಿಯುವುದಿಲ್ಲ. ಯಗಚಿ ರಿವರ್‌ನಿಂದ ಬೇರೆ ಒಂದು ಪ್ರಾಜೆಕ್ಟ್ ಕಟ್ಟಲು ರಿಪೋರ್ಟ್ ತಯಾರಾಗಿ ಅದನ್ನು ಸೆಂಟ್ರಲ್ ವಾಟರ್ ಪವರ್ ಕಮೀಷನ್‌ಗೆ ಕಳುಹಿಸಲಾಗಿದೆ. ಇನ್ನೂ ಅದರ ಬಗ್ಗೆ ನಮಗೆ ಕ್ಲಿಯರೆನ್ಸ್ ಬಂದಿಲ್ಲ. ಮತ್ತು ಅರಸೀಕೆರೆ ತಾಲ್ಲೂಕು ನೀರಾವರಿ ಆಗತಕ್ಕಂಥ ಪ್ರದೇಶವಾದರೂ ಕೂಡ ಈ ಯಗಚಿ ರಿವರ್‌ರಿಪೋರ್ಟ್ ಬಗ್ಗೆ ನಾವು ಇನ್ನೂ ಏನು ಇನ್‌ವೆಸ್ಟಿಗೇಷನ್ ಮಾಡಿಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ.—ಈ ಯಗಚಿ ರಿವರ್ ಪ್ರಾಜೆಕ್ಟ್‌ಗೆ ಪ್ಲಾನ್ ಮತ್ತು ಎಸ್ಟಿಮೇಟ್ ತಯಾರಾಗಿದೆ ಎಂದು ಕೇಳಿದ್ದೇನೆ; ಮತ್ತು ಇದು ಕೇಂದ್ರ ಸರ್ಕಾರದಲ್ಲಿ ೩ ವರ್ಷದಿಂದಲೂ ಇದೆ ಎಂದು ಕೇಳಿದ್ದೇನೆ, ಆದುದರಿಂದ ನಾನು ಹೇಳುವುದು ಇದಕ್ಕೆ ನಾನು ಏನು ಕಠಿಣ ಶಬ್ದವನ್ನು ಉಪಯೋಗಿಸಬೇಕೋ ಅದನ್ನು ಉಪಯೋಗಿಸಿ ಕೇಂದ್ರ ಸರ್ಕಾರಕ್ಕೆ ತಮ್ಮ ವರ್ಚಸ್ಸನ್ನು ಬೀರಿ ಈ ಪ್ರಾಜೆಕ್ಟನ್ನು ಮಂಜೂರು ಮಾಡಿಸುವುದಕ್ಕೆ ಈಗಲಾದರೂ ಪ್ರಯತ್ನಿಸುತ್ತೀರಾ ?

ಶ್ರೀ ಸುಭಾಸ್ ಅಸ್ಕೂರೆ —ಅಲ್ಲಿನ ಪರಿಸ್ಥಿತಿ ಚೆನ್ನಾಗಿ ಅರಿತುಕೊಂಡಿದ್ದೇನೆ. ಯಗಚಿ ರಿವರ್‌ನಲ್ಲಿ ಒಂದು ಪ್ರಾಜೆಕ್ಟ್ ಕಟ್ಟಿದರೆ ಅದರಿಂದ ಬೆಲೂರು ತಾಲ್ಲೂಕಿನ ಕೆಲವು ಭಾಗಗಳಲ್ಲಿ ಮತ್ತು ಹಾಸನ ತಾಲ್ಲೂಕಿನ ಕೆಲವು ಭಾಗಗಳಲ್ಲಿ ನೀರಾವರಿ ಯಾಗುತ್ತದೆ. ಸುಮಾರು ೩೨ ಸಾವಿರ ಎಕರೆ ನೀರಾವರಿ ಯಾಗುತ್ತದೆ ಈ ಬಗ್ಗೆ ೭ ಕೋಟಿ ರೂಪಾಯಿನ ಪ್ರಾಜೆಕ್ಟ್ ರಿಪೋರ್ಟನ್ನು ತಯಾರು ಮಾಡಿ ಸೆಂಟ್ರಲ್ ವಾಟರ್ ಪವರ್ ಕಮೀಷನ್‌ಗೆ ಕಳುಹಿಸಲಾಗಿದೆ. ಅಲ್ಲಿಂದ ಇನ್ನೂ ಕ್ಲಿಯರನ್ಸ್ ಬಂದಿಲ್ಲ. ಅದು ಬಂದ ಮೇಲೆ ವಿಚಾರಮಾಡೋಣ.

*Allotment of lands by the Shikaripur Taluk Land Grant Committee.

545. SRI K. YENKATAPPA (Shikaripura)

Will the Minister for Revenue be pleased to state:—

(*a*) the number of persons to whom the Survey Nos. in which and the extent of Land has been distributed by the Shikaripura Taluk Land Grant Committee on 31-8-1974;

(*b*) out of them, the extent of land granted to Harijans and Girijans;

(*c*) to whom and the extent of Land Granted in Survey No. 2 of Bacharak village called Bhadrapur of Udagoni hobli in Shikaripura Taluk; whether the Committee has followd the rules and regulation while distributing lands;

(*d*) whether they do not have the family properties; if so, the details of their properties;

(e) whether it is a fact that these parsons are owing lands, motor vehicles, rice mills and other business, deals;

(f) if so, the reasons for allotting lands to such persons;

(g) whether the Govrenment proposes to cancel such aliotments?

SRI N. HUTCHMNSTHY GOWDA (Minister for Revenue).—

(a) (1) Sri Kondareddy bin Peddareddy, Survey No. 4, Harihara pura ... 27 Gunts

(2) Sri K. Bamappa bin Giriyappa, Survey No. 41, Hothamakatte ... 4 acres.

(3) Sri Chandrasekharappa, Survey No. 203 Kortagere ... 4 acres. 13 Gunts.

(4) Sri Anandappa, Survey No. 40, Hirekalivathi ... 2 acreas 20 Gunts

(5) Sri M. N. Bhaskar Shetty, Survey No. 2, Bhadrapura ... 8 acres.

(6) Sri M.N. Manjanath Shetty, Survey No. 2, Bhadrapura 8 acres:

(7) Sri M.N. Balakrishna Shetty, Survey No. 2, Bhadrapura 8 acres

(b) Information for these questions are being collected. full information will be furnished in due course.

(c) do do

(d) do do

(e) do do

(f) do do

(g) do do

SRI K. YENKATAPPA.—Sir, the number of persons to whom the survey Nos in which and the extent of Land has been distributed by the Shikaripura Taluks Land Grand Committee on 30-8-74'' ಎಂದು ಕೇಳಿರುವ ಈ ಪ್ರಶ್ನೆಗೆ ಉತ್ತರವಾಗಿ ತಾವು ಕೆಲವು ಹೆಸರುಗಳನ್ನು ಕೊಟ್ಟಿದ್ದೀರಿ. ಇನ್ನೂ ಕೆಲವು ಹೆಸರುಗಳನ್ನು ಕೊಟ್ಟಿಲ್ಲ. ನಾನು ಅವರ ತಂದೆ ಹೆಸರು ಇತ್ಯಾದಿ ವಿವರಗಳನ್ನು ಒಳಗೊಂಡಂತೆ ಪ್ರಶ್ನೆಯನ್ನು ವಿವರವಾಗಿ ಕೇಳಿದ್ದೇನೆ, ಅದು ಯಾವರೀತಿ ಎಂದರೆ ಲ್ಯಾಂಡ್ ಗ್ರಾಂಟ್ ಕಮಿಟಿಯವರು ಮಂಜೂರು ಮಾಡಿರತಕ್ಕಂಥಾದ್ದರ ಜಮೀನುಗಳ ಬಗ್ಗೆ ಅವರ ಹೆಸರು, ವಿಳಾಸ, ಎಲ್ಲ ಪೂರ್ಣ ವಿವರಗಳನ್ನು ಕೇಳಿದ್ದೇನೆ. ಯಾರು ಯಾರಿಗೆ ಜಮೀನುಗಳು ಗ್ರಾಂಟ್ ಆಗಿದೆ, ಅವರ ತಂದೆ ಹೆಸರು ಏನು, ಅವರ ವಿಳಾಸ ಏನು ಎಲ್ಲಾ ಕೇಳಿದ್ದರೂ ಕೂಡ ಕೆಲವು ಹೆಸರುಗಳನ್ನು ಕೊಟ್ಟಿದ್ದೀರಿ, ಇನ್ನು ಕೆಲವು ಹೆಸರುಗಳನ್ನು ಬಿಟ್ಟಿದ್ದೀರಿ. ಮತ್ತು ಇದರಲ್ಲಿ (ಎ) ಗೆ ಉತ್ತರವಾಗಿ ಕೊನೆಯಲ್ಲಿ ಸೀರಿಯಲ್ ನಂಬರ್ ೫, ೬, ಮತ್ತು ೭ರಲ್ಲಿ ಏನು ಹೆಸರುಗಳು ಇವೆ ಇವರ ತಂದೆ ಹೆಸರು ಏನು ಅದನ್ನು ಕೊಟ್ಟಿಲ್ಲ ಅಲ್ಲದೆ ಇನ್ನೂ ಇದೇ ರೀತಿ ಹೆಸರುಗಳನ್ನು ಕೊಟ್ಟಿಲ್ಲ. ತಾವು ಈ ವಿವರಗಳನ್ನೆಲ್ಲಾ ಬಧಗಿಸಲು ತಡವಾಗುತ್ತದೆ ಎಂದು ಹೇಳಿದ್ದೀರಿ ತಡವಾದರೂ ಚಿಂತೆಇಲ್ಲ. ೧೯೬೫-೬೬ ರಲ್ಲಿ ಕೆಲವರಿಗೆ ಜಮೀನು ಕೊಟ್ಟಿದ್ದರೂ ಕೂಡ ಪುನಃ ಅವರಿಗೆ ಜಮೀನು ಕೊಟ್ಟಿದ್ದೀರಿ. ಇದನ್ನು ತನಿಖೆ ಮಾಡಿ ಆ ರೀತಿ ಪುನಃ ಏನಾದರೂ ಅವರಿಗೇನೇ ಜಮೀನು ಕೊಟ್ಟಿದ್ದರೆ ಅದನ್ನು ರದ್ದು ಮಾಡುವುದಕ್ಕೆ ವ್ಯವಸ್ಥೆ ಮಾಡುತೀರಾ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಕೇಳಿದ ಪ್ರಶ್ನೆ ಈ ರೀತಿ ಇದೆ — "the number of persons to whom the survey Nos. in which and the extent of Land has been distributed by the Shikaripura Taluk Land Grant Committee on 30-8-74" ಅಂತ ಇದೆ. ಅದಕ್ಕೆ ಸರಿಯಾಗಿ ಉತ್ತರವನ್ನು ಕೊಟ್ಟಿದ್ದೇವೆ. ಇವರ ತಂದೆ ಹೆಸರು ವಿಳಾಸ ಇದರಲ್ಲಿ ಬೇಕು ಅಂತ ಕೊಟ್ಟಿಲ್ಲ. ಅದೂ ಕೂಡ ಬೇಕು ಎಂದರೆ ಅದನ್ನೂ ಕೂಡ ಒದಗಿಸಬಹುದಾಗಿತ್ತು. ಈಗ ಮಾನ್ಯ ಸದಸ್ಯರು ಕೇಳಿದ್ದಾರೆ ಪ್ರತಿಯೊಬ್ಬರಿಗೂ ಏನೇನು ಸಂಬಂಧ ಇದೆ ಅಂತ. ಈಗ ನನ್ನ ಹತ್ತಿರ ಆ ವಿವರ ಇಲ್ಲ. ಆದರೆ ನಾನು ಇಷ್ಟು ಮಾತ್ರ ಊಹೆ ಮಾಡಿ ಹೇಳಬಲ್ಲೆ ತಪ್ಪು ಇದ್ದರೆ ದಯಮಾಡಿ ಕ್ಷಮಿಸಬೇಕು. ಈ ಪ್ರಶ್ನೆಯ (ಅ)ಗೆ ಉತ್ತರವಾಗಿ ಕೊನೆಯಲ್ಲಿ ೫, ೬, ೭, ಈ ಹೆಸರುಗಳು ಏನು ಇವೆ ಈ ಮೂರು ಜನ ಹೆಸರಿನ ಇನ್‌ಫಿಯಂಲ್ಲಿ ಒಂದೇ ಆದುದರಿಂದ ಅವರು ಸಹೋದರರು ಎಂದು ತಿಳಿದುಕೊಂಡಿದ್ದೇನೆ. ಮಾನ್ಯ ಸದಸ್ಯರು ಏನು ಹೇಳಿದರು ಎಂದರೆ ಹಿಂದೆ ಜಮೀನು ತೆಗೆದುಕೊಂಡಿದ್ದವರು ಪುನ: ಅವರೆ ಜಮೀನು ತೆಗೆದುಕೊಂಡಿದ್ದಾರೆ, ಅವರಿಗೆ ಮತ್ತೆ ಏತಕ್ಕೆ ಜಮೀನು ಕೊಟ್ಟಿದ್ದಾರೆ ಎಂದು ಕೇಳಿದರು. ಈ ಬಗ್ಗೆ ಪೂರ್ಣ ವಿವರವನ್ನು ತಿಳಿದು ಉತ್ತರ ಕೊಡಬೇಕು. ನಿನ್ನೆ ತಾನೇ ಈ ಬಗ್ಗೆ ಇಷ್ಟು ಇನ್‌ಫರ್ಮೇಷನ್ ಬಂದಿದ್ದರಿಂದ ಅಷ್ಟು ಮಾತ್ರ ಈ ಸಭೆಗೆ ತಿಳಿಸಿದ್ದೇನೆ. ಇನ್ನೂ ಹೆಚ್ಚು ವಿವರ ಬೇಕಾದರೆ ಇದಕ್ಕೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ. ಆದುದರಿಂದ ತಮ್ಮಲ್ಲಿ ಆರಿಕೆ ಮಾಡಿಕೊಳ್ಳುತ್ತೇನೆ. ಮಾನ್ಯ ಸದಸ್ಯರು ಏನು ಹೆಚ್ಚು ವಿವರಗಳನ್ನು ಕೇಳಿದ್ದಾರೆ. ಅಂದರೆ ಇವರುಗಳಿಗೆ ಇನಾತಕ್ಕಿಂಥ ಜಮೀನುಗಳು, ಮೋಟಾರ್ ವಾಹನಗಳು, ರೈಸ್‌ಮಿಲ್ಸ್ ಮತ್ತು ಇತರೇ ವ್ಯಾಪಾರ ವ್ಯವಹಾರಗಳು ಏನೇನಿದೆ ಅಂತ ಕೇಳಿದ್ದಾರೆ ಮತ್ತು ಯಾರು ಯಾರಿಗೆ ಏನೇನು ಸಂಬಂಧ ಇದೆ ಎಂದು ಕೇಳಿದ್ದಾರೆ, ಈ ಬಗ್ಗೆ ಹೆಚ್ಚು ವಿವರಗಳನ್ನು ಸಂಗ್ರಹಿಸುವುದಕ್ಕೆ ಕಾಲಾವಕಾಶ ಬೇಕಾಗುವುದರಿಂದ ಅದಕ್ಕೆ ಕಾಲಾವಕಾಶ ಕೊಡಬೇಕು ಎಂದು ಕೇಳುತ್ತೇನೆ.

ಶ್ರೀ ಕೆ. ಯಂಕಟಪ್ಪ.—ಸ್ವಾಮಿ, ದರಖಾಸ್ತು ಜಮೀನಿಗೆ ಅರ್ಜಿ ಹಾಕಬೇಕಾದರೆ ಆ ಅರ್ಜಿದಾರರು ಅವರ ಹೆಸರು ಮತ್ತು ವಿಳಾಸಗಳನ್ನು ಕೊಟ್ಟಿಕೊಡುತ್ತಾರೆ. ಆದುದರಿಂದ ತಮಗೆ ಕೊ ೃಂಥ ಮಾಹಿತಿಗಳು ಏನು ಇವೆ ಅದನ್ನು ಅಧಿಕಾರಿಗಳು ಕೊಡಬೇಕಾಗಿತ್ತು. ಅವರು ಈ ಇನ್‌ಫರ್ಮೇಷನ್ ಅನ್ನು ಏತಕ್ಕೆ ಕೊಡಲಿಲ್ಲಾ ? ಎರಡನೆಯದಾಗಿ ಇದರಲ್ಲಿ ಕೆಲವುಕ್ಕೆ ಮಾತ್ರ ಪೂರ್ಣ ವಿವರ ಕೊಟ್ಟಿದ್ದಾರೆ ಇನ್ನು ಕೆಲವನ್ನು ಉದ್ದೇಶಪೂರ್ವಕವಾಗಿ ಬಿಟ್ಟಿದ್ದಾರೆ. ಆದುದರಿಂದ ಈ ಬಗ್ಗೆ ಪೂರ್ಣ ತನಿಖೆ ಮಾಡಲು ಸ್ವಲ್ಪ ವೇಳೆ ತೆಗೆದುಕೊಂಡರೂ ಚಿಂತೆ ಇಲ್ಲ, ಅದು ಸರಿಯಾಗಿ ಕಾನೂನು ಬದ್ಧವಾಗಿ ಇರಬೇಕು ಜಮೀನನ್ನೂ ಹೇಗೆ ಭಾಗ ಮಾಡಿದ್ದಾರೆ, ಮತ್ತು ಇವರಿಗೆ ಇನ್ನೇನು ಅಸ್ತಿ ಪಾಸ್ತಿಗಳು ಇವೆ ಇವನ್ನೆಲ್ಲಾ ಪೂರ್ಣವಾಗಿ ತನಿಖೆ ಮಾಡಿಸಿ. ಇದನ್ನು ರೆವಿನ್ಯೂ ಅಧಿಕಾರಿಗಳಿಗೆ ವಹಿಸಿದರೆ ಈ ಬಗ್ಗೆ ಕರೆಕ್ಟ್ ಇನ್‌ಫರ್ಮೇಷನ್ ಸಿಕ್ಕುವುದಿಲ್ಲ. ಬೇರೆಯವರಿಗೆ ವಹಿಸಿ. ಆ ಅರ್ಜಿಯಲ್ಲಿ ಎಲ್ಲಾ ವಿವರಗಳೂ ಇವೆ ಆದರೂ ಕೂಡ ಈ ಎಷ್ಟಾ ವಿವರಗಳನ್ನು ಇಲ್ಲಿ ಕೊಟ್ಟಿ. ಆದುದರಿಂದ ಈ ಬಗ್ಗೆ ಪೂರ್ಣ ತನಿಖೆ ಮಾಡಿಸಿ ಇನ್‌ವೆಸ್ಟಿಗೇಷನ್ ಮಾಡಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಈ ಸಭೆಗೆ ಇಷ್ಟು ಮಾತ್ರ ಭರವಸೆ ಕೊಡುತ್ತೇನೆ. ಯಾರು ಯಾರಿಗೆ ಏನೇನು ಸಂಬಂಧ ಇದೆ, ಅವರ ಹೆಸರಿನಲ್ಲಿ ಯಾವ ಯಾವ ಜಮೀನುಗಳು ಇವೆ ಇವನ್ನೆಲ್ಲಾ ಸಂಗ್ರಹಿಸುವುದಕ್ಕೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ ಈ ಬಗ್ಗೆ ಪೂರ್ಣ ತನಿಖೆ ಮಾಡಿಸಿ ಅದನ್ನು ಸಭೆಯ ಮುಂದೆ ಇಡಬೇಕಾದ್ದು ಅತ್ಯಾವಶ್ಯಕ. ಮತ್ತು ಸಂಬಂಧಪಟ್ಟ ಅಧಿಕಾರಿಗಳು ಏನಾದರೂ ತಪ್ಪು ಮಾಡಿದ್ದರೆ ಆ ಬಗ್ಗೆ ವಿಚಾರಿಸುತ್ತೇನೆ. ಅವರು ಭೂ ಹಂಚಿಕೆಯ ಸಮಿತಿಯವರಿಗೆ ಪೂರ್ಣ ವಿಷಯವನ್ನು ತಿಳಿಸಿದ್ದಾರೆ ಎಂದು ತಿಳಿದುಕೊಂಡಿದ್ದೇನೆ ಅವರು ಭೂ ಹಂಚಿಕೆಯ ಸಮಿತಿಯವರಿಗೆ ಏನಾದರೂ ಮೋಸ ಮಾಡಿದ್ದರೆ ಅವರ ಬಗ್ಗೆ ಪೂರ್ಣ ತನಿಖೆ ಮಾಡಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ತಕ್ಕ ಕಾರ್ಯಕ್ರಮ ಕೈಗೊಳ್ಳುತ್ತೇನೆ.

Amount Spent on Works by P. W. D. in Dharwar District.

166 SRI B. G. BANAKAR (Hirekerur).—Will the Minister for Public Works be pleased to state.—

(*a*) the total amount spent by all the Assistant Engineers in Dharwar District towards various works in their PWD Sub-Divisions during 1973-74 and from 1-4-1974 upto 30-11-1974 ;